

ಒಂದು ಬದಿ ದೊಡ್ಡ ದೊಡ್ಡ ಕುಂಡಗಳಲ್ಲಿ ಬೆಳೆಸಿರುವ ಬೋನ್ಸಾಯ್ ಗಿಡಗಳು, ಆಫ್ರಿಕನ್ ಆನೆಗಳ ಪ್ರತಿಕೃತಿಗಳು ಸ್ವಾಗತಿಸುತ್ತವೆ. ಮತ್ತೊಂದು ಬದಿಯಲ್ಲಿ ಬೃಹತ್ ಗಾತ್ರದ, ಥಾಯ್ಲೆಂಡ್‌ನ ರಾಷ್ಟ್ರೀಯ ಫಲ ಮ್ಯಾಂಗೋ ಸ್ಟೀನ್, ದಿ ಕಿಂಗ್ ಆಫ್ ಫ್ರೂಟ್ 'ದುರಿಯನ್' ರಾಂಬುಟಾನ್, ಬಾಳೆಹಣ್ಣು, ಸೀತಾಫಲ, ಸೀಬೆಕಾಯಿ ಮತ್ತು ಅಲ್ಲಿನ ಇತರ ಹಣ್ಣುಗಳ ಪ್ರತಿಕೃತಿಗಳಂತೂ ಆಕರ್ಷಕವಾಗಿವೆ.

ಪ್ರವೇಶ ದ್ವಾರದ ಒಳಭಾಗದಲ್ಲಿ ಮೊದಲಿಗೆ ಗಾಜಿನ ಮನೆಯೊಳಗೆ ವ್ಯವಸ್ಥಿತವಾಗಿ ಬೆಳೆಸಿದ ಕ್ಯಾಕ್ಟಸ್ ಉದ್ಯಾನವಿದ್ದು, ವಿವಿಧ ಬಗೆಯ ಆಕರ್ಷಕ ಕ್ಯಾಕ್ಟಸ್‌ಗಳನ್ನು ಕಾಣಬಹುದು. ಮೆಕ್ಸಿಕನ್ ಗೋಲ್ಡನ್ ಬ್ಯಾರಲ್ ಕ್ಯಾಕ್ಟಸ್, ಬಣ್ಣ ಬಣ್ಣದ ಹೂಗಳನ್ನು ಅರಳಿಸುವ ಲೋಟಿವಿಯಾ ಕ್ಯಾಕ್ಟಸ್, ಈಸ್ಟರ್ ಲಿಲ್ಲಿ, ಎಲಿಫೆಂಟ್ ಕ್ಯಾಕ್ಟಸ್ ಹೀಗೆ ಹಲವು ಪ್ರಭೇದಗಳು ಇಲ್ಲಿವೆ. ಮೆಲೋ ಕ್ಯಾಕ್ಟಸ್ ವೃತ್ತಾಕಾರವಾಗಿರುತ್ತದೆ. ಇದನ್ನು **Turk's cap** ಅಥವಾ **Pope's head** ಕ್ಯಾಕ್ಟಸ್ ಎನ್ನುತ್ತಾರೆ. ಇದು ಕೆರೆಬಿಯನ್ ಮೂಲವಾಗಿದ್ದು 30 ರಿಂದ 40 ತಳಿಗಳಿವೆ.

ಇಟಾಲಿಯನ್ ಗಾರ್ಡನ್, ಫ್ರೆಂಚ್ ಗಾರ್ಡನ್, ಯೂರೋಪಿಯನ್ ಗಾರ್ಡನ್, ಆರ್ಕಿಡ್ ಗಾರ್ಡನ್, ಬಟರ್‌ಫ್ಲೈ ಹಿಲ್, ಪಾಟರಿ ಗಾರ್ಡನ್, ಸ್ಟೋನ್ ಹಿಂಚ್ ಗಾರ್ಡನ್, ಜುರಾಸಿಕ್ ಪಿರಿಯಡ್, ದೈತ್ಯಾಕಾರದ ಕೀಟಗಳ ಪ್ರತಿಕೃತಿಗಳು, ಫರ್ನ್ಸ್, ಸೈಕಾಡ್ಸ್, ಕ್ರೋಟಾನ್, ಬೋನ್ಸಾಯ್ ಹೀಗೆ ಹಲವು ವಿಭಾಗಗಳನ್ನಾಗಿ ಉದ್ಯಾನವನ್ನು ವಿಂಗಡಿಸಲಾಗಿದೆ. ನಾಂಗ್ ನೂಚ್ ಅವರ ಪುತ್ರ ಕ್ಯಾಮಟನ್ ಟಾನ್ಸಚ್ ಬಹಳ ಮುತುವರ್ಜಿಯಿಂದ ಈ ಉದ್ಯಾನವನ್ನು ಸೂಕ್ಷ್ಮವಾಗಿ ರೂಪಿಸಿದ್ದಾರೆ. ವಿವಿಧ ದೇಶಗಳ ಸಸ್ಯಗಳೂ ಈ ಉದ್ಯಾನವನ್ನು ಅಲಂಕರಿಸಿವೆ. ಇಲ್ಲಿನ ದೈತ್ಯಾಕಾರದ ಡೈನೊಸಾರ್‌ಗಳ ಇಟಲಿಯ ಮಾರ್ಬಲ್ ಪ್ರತಿಮೆಗಳು ಸೋಜಿಗ ಉಂಟು ಮಾಡುತ್ತವೆ. ಪಾಟರಿ ಗಾರ್ಡನ್‌ನಲ್ಲಿ ಮಣ್ಣಿನ ಪುಟ್ಟ ಪುಟ್ಟ ಕುಂಡಗಳನ್ನು ಜೋಡಿಸಿ ನಿರ್ಮಿಸಿರುವ ಬೃಹತ್ ಕಮಾನುಗಳು, ಹೂದಾನಿ, ಆಟೋರಿಕ್ಷಾ, ಮಣ್ಣಿನ ಆಲಂಕಾರಿಕ ವಸ್ತುಗಳಲ್ಲಿನ ಕುಂಬಾರಿಕೆಯ ಕಲೆ ಕಣ್ಮನ ತಣಿಸುತ್ತದೆ.

ಆರ್ಕಿಡ್ ಉದ್ಯಾನವಂತೂ ಪ್ರವಾಸಿಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಥಾಯ್ ಸಂಸ್ಕೃತಿಯಲ್ಲಿ ಆರ್ಕಿಡ್ ಹೂವು ರಾಷ್ಟ್ರೀಯ ಗುರುತಾಗಿದೆ. ಘನತೆ ಮತ್ತು ಗೌರವದ ಸಂಕೇತವಾಗಿದೆ. ಮೋಹಕ ಬಣ್ಣಗಳ ಆರ್ಕಿಡ್ ಹೂಗಳು ಮನಸಳೆಯುತ್ತವೆ. ಅಲ್ಲಲ್ಲಿ ಜೋಡಿಸಿಟ್ಟಿರುವ ಪಾಂಡಾಗಳ ಪ್ರತಿಕೃತಿ ಇನ್ನಷ್ಟು ಮೆರುಗು ತಂದಿದೆ. ಆಗಾಗ ಹೊರಹೊಮ್ಮುವ ಕೃತಕ ಹೊಗೆ ಅಲ್ಲೊಂದು ರಮ್ಯತಾಣವನ್ನೇ ಸೃಷ್ಟಿಸುತ್ತದೆ.

ಉದ್ಯಾನವನದ ಮಧ್ಯಭಾಗದಲ್ಲಿ 6 ಕಿ.ಮೀ. ಉದ್ದದ ಸ್ಕೈವಾಕ್ ಹೊಂದಿದ್ದು ಸುತ್ತಲಿನ ಸೌಂದರ್ಯವನ್ನು ಸವಿಯಬಹುದು. ಫ್ರೆಂಚ್ ಗಾರ್ಡನ್ ಮತ್ತು ಥಾಯ್ ಪೆವಿಲಿಯನ್ ಮಧ್ಯದಲ್ಲಿ ಭೂತಾನ್ ದೇಶದ ಒಂಬತ್ತು ಪ್ರಾರ್ಥನಾ ಧ್ವಜಗಳನ್ನು ಕಾಣಬಹುದು. ಇವುಗಳನ್ನು ಭೂತಾನ್ ರಾಯಭಾರ ಕಚೇರಿಯಿಂದ ಉಡುಗೊರೆಯಾಗಿ ನೀಡಲಾಗಿದೆ. ಇವುಗಳ ಬಣ್ಣ ಮಸುಕಾಗುವುದರಿಂದ ಪ್ರತಿ ಆರು ತಿಂಗಳಿಗೊಮ್ಮೆ ಈ ಧ್ವಜಗಳನ್ನು ಬದಲಾಯಿಸುತ್ತಾರೆ. ಹೊಸ ಧ್ವಜಗಳನ್ನು ಭೂತಾನ್ ರಾಯಭಾರ ಕಚೇರಿಯವರಿಂದಲೇ ನಾಂಗ್ ನೂಚ್ ಗಾರ್ಡನ್ ಅವರಿಗೆ ಹಸ್ತಾಂತರಿಸಲಾಗುತ್ತದೆ. ಇದು ಸಸ್ಯೋದ್ಯಾನ ಮಾತ್ರವಲ್ಲ ಪ್ರವಾಸಿಗರನ್ನು ರಂಜಿಸಲು ಹಲವು ಕಾರ್ಯಕ್ರಮಗಳನ್ನು ಕೂಡ ಆಯೋಜಿಸಿರುತ್ತಾರೆ. ಥಾಯ್ ನೃತ್ಯ ಪ್ರದರ್ಶನವೂ ಇಲ್ಲಿ ನಡೆಯುತ್ತದೆ. ಥಾಯ್ ಸಂಸ್ಕೃತಿ ಬಿಂಬಿಸುವ ಈ ಕಲಾ ಪ್ರಕಾರದಲ್ಲಿ ನೃತ್ಯಗಾರ್ತಿಯರು ಮನಸೂರೆಗೊಳ್ಳುತ್ತಾರೆ. ಪ್ರವಾಸಿಗರರಲ್ಲಿ ಹೆಚ್ಚಿನವರು ಭಾರತೀಯರೇ ಆಗಿರುವುದರಿಂದ ಒಂದೆರಡು ಹಿಂದಿ ಚಲನಚಿತ್ರ ಗೀತೆಗಳನ್ನು ನೃತ್ಯದಲ್ಲಿ ಅಳವಡಿಸಿಕೊಂಡಿದ್ದಾರೆ. ಇದು ಎಲ್ಲರ ಚಪ್ಪಾಳೆ ಗಿಟ್ಟಿಸುತ್ತದೆ.

ಮತ್ತೊಂದು ಮನರಂಜನೆ ಎಲಿಫೆಂಟ್ ಶೋ. ತರಬೇತಿ ಪಡೆದ ಆನೆಗಳಿಂದ ಕೆಲವು ಕ್ರೀಡೆಗಳನ್ನು ಆಡಿಸುತ್ತಾರೆ. (ರಿಂಗ್ ಹಾಕುವುದು, ಚಂಡಿನ ಆಟ ಇತ್ಯಾದಿ) ಮನರಂಜನೆ ಕಾರ್ಯಕ್ರಮಕ್ಕೆ ಪ್ರತ್ಯೇಕ ಶುಲ್ಕವಿರುತ್ತದೆ. ದಿನದಲ್ಲಿ ಮೂರು ಪ್ರದರ್ಶನಗಳಿದ್ದು, ಪ್ರವಾಸಿಗರು ಅವರಿಗೆ ಅನುಕೂಲ ಸಮಯದ ಪ್ರದರ್ಶನಕ್ಕೆ ಹಾಜರಾಗಬಹುದು. ಇದರ ಸಮೀಪದಲ್ಲೇ ವಿವಿಧ ಮಾದರಿಯ ಕಾರುಗಳ ಮ್ಯೂಸಿಯಂ ಕೂಡ ಇದೆ.

ನಾಂಗ್ ನೂಚ್ ಉಷ್ಣವಲಯದ ಸಸ್ಯಶಾಸ್ತ್ರೀಯ ಉದ್ಯಾನವನದ ಎಲ್ಲಾ ವಿಭಾಗಗಳನ್ನು ಸಂಪೂರ್ಣವಾಗಿ ವೀಕ್ಷಿಸಲು ಎರಡರಿಂದ ಮೂರು ಗಂಟೆ ಸಮಯ ಬೇಕಾಗುತ್ತದೆ. ಉದ್ಯಾನವನ ವೀಕ್ಷಿಸಲು ವಿಐಪಿ ಕಾರ್ ಸರ್ವೀಸ್ ಮತ್ತು ತೆರೆದ ಬಸ್ ವ್ಯವಸ್ಥೆ ಇದೆ. ಪ್ರತಿ 30 ನಿಮಿಷಗಳಿಗೊಮ್ಮೆ ಈ ಬಸ್ ಪ್ರಯಾಣಿಕರಿಗೆ ಸೌಲಭ್ಯ ಕಲ್ಪಿಸುತ್ತದೆ. ಇದಕ್ಕೆ ಪ್ರತ್ಯೇಕವಾಗಿ ಟಿಕೆಟ್ ಖರೀದಿಸಬೇಕು.

ಗಾರ್ಡನ್ ಒಳಗೆ ಓಡಾಡಿ ದಣಿವಾದರೆ ಹಸಿವು ನೀಗಿಸಿಕೊಳ್ಳಲು ರುಚಿಕರ ಸಸ್ಯಾಹಾರ ಮತ್ತು ಮಾಂಸಾಹಾರ ಭೋಜನದ ವ್ಯವಸ್ಥೆ ಹೊಂದಿರುವ ಸುಸಜ್ಜಿತ ರೆಸ್ಟೋರೆಂಟ್ ಇದೆ. ಬಫೆ ಪದ್ಧತಿ ಹೊಂದಿರುವ ಈ ರೆಸ್ಟೋರೆಂಟ್‌ನಲ್ಲಿ ಒಂದೇ ಬಾರಿಗೆ 300 ಮಂದಿ ಕುಳಿತು ಭೋಜನ ಸವಿಯಬಹುದು. ಸುತ್ತಲಿನ ಆಕರ್ಷಕ ವಿನ್ಯಾಸದ ಹಸಿರು ಪರಿಸರವನ್ನು ವೀಕ್ಷಿಸುತ್ತಾ ತುಸು ಹೆಚ್ಚಾಗಿಯೇ ಆಹಾರ ಸೇವಿಸುವಂತೆ ಮಾಡಿದ್ದು ಸುಳ್ಳಲ್ಲ. ಇದೊಂದು ಅಪೂರ್ವ ಮನಮೋಹಕ ಉದ್ಯಾನವನವಾಗಿದ್ದು ವಿಶಾಲ ಜಾಗದಲ್ಲಿ ವಿಪುಲ ಸಸ್ಯ ಸಂಗ್ರಹ ಹೊಂದಿದೆ. ಇಲ್ಲಿಗೆ ಭೇಟಿ ನೀಡಲು ನವೆಂಬರ್‌ನಿಂದ ಫೆಬ್ರುವರಿ ಸೂಕ್ತ ಸಮಯ. ಥಾಯ್ಲೆಂಡ್ ಪ್ರವಾಸಕ್ಕೆ ತೆರಳುವವರು ತಪ್ಪದೇ ಇಲ್ಲಿಗೆ ಭೇಟಿ ನೀಡಿ ಪ್ರವಾಸವನ್ನು ಅವಿಸ್ಮರಣೀಯವನ್ನಾಗಿಸಿಕೊಳ್ಳಬಹುದು. ■

